ಮಾಡಲಾಗುತ್ತಿದೆ. ಸದರಿ ಭಾಗದ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರದಿಂದ ಸೂಕ್ಷ್ಮ (5054/3054) ಲೆಕ್ಕಶೀರ್ಷಿಕೆಗಳಡಿಯಲ್ಲಿ ಬಿಡುಗಡೆಗೊಳ್ಳುವ ಅನುದಾನದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು 2012–13 ನೇ ಸಾಲಿನಲ್ಲಿ ಮಳವಳ್ಳಿ ತಾಲ್ಲೂಕಿಗೆ ಲೆಕ್ಕ ಶೀರ್ಷಿಕೆ 5054 ರಲ್ಲಿ ರೂ. 332.39 ಮತ್ತು ಲೆಕ್ಕ ಶೀರ್ಷಿಕೆ 3054 ರಲ್ಲಿ ರೂ.303.96 ಗಳನ್ನು ಒಟ್ಟು ರೂ.636.35 ಗಳನ್ನು ಲೋಕೋಪಯೋಗಿ ಇಲಾಖೆ ವತಿಯಿಂದ ರಸ್ತೆಗಳ ಅಭಿವೃದ್ಧಿ ಹಾಗೂ ನಿರ್ವಹಣಾ ಕಾರ್ಯಗಳಿಗೆ ಬಿಡುಗಡೆ ಮಾಡಲಾಗಿದೆ.

ಬರ ನಿರ್ವಹಣೆ

(250) 253

ಶ್ರೀ ನರೇಂದ್ರ ಸ್ವಾಮಿ ಪಿ.ಎಂ(ಮಳವಳ್ಳಿ)

ಅ) ಬರ ನಿರ್ವಹಣೆಗಾಗಿ ಕುಡಿಯುವ ನೀರು, ನಿರುದ್ಯೋಗ ನಿವಾರಣೆ, ಆರೋಗ್ಯ ಸಮಸ್ಯೆ ನಿವಾರಣೆ ವಿಷಯದಲ್ಲಿ ಸರ್ಕಾರ ಈ ಬೇಸಿಗೆಯಲ್ಲಿ ಯಾವ ರೀತಿ ನಿರ್ವಹನೆ ಮಾಡಲು ನಿರ್ಧರಿಸಿದೆ?

(ವಿಧಾನಸಭ ಕ್ಷೇತ್ರವಾರು ವಿವರ ನೀಡುವುದು)

ಆ) ಬರ ನಿರ್ವಹಣೆಯ ಅನುಷ್ಠಾನಕ್ಕಾಗಿ ಬಿಡುಗಡೆಯಾದ ಅನುದಾನ ಎಷ್ಟು?

ಶ್ರೀ ಕೆ.ಎಸ್.ಈಶ್ವರಪ್ಪ ಉಪ ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರು

ಅ) ಬರ ನಿರ್ವಹಣೆಗಾಗಿ ರೂ. 620.00 ಕೋಟಿ ಅನುದಾನ ಸರ್ಕಾರದಿಂದ ಖರ್ಚು ಮಾಡಲಾಗಿದೆ. ಇದರ ಪೈಕಿ ಕುಡಿಯುವ ನೀರಿನ 17,662 ಕಾಮಗಾರಿಗಳಿಗೆ ರೂ.293.00 ಕೋಟಿ, ರೂ.85.00 ಕೋಟಿ ಜಾನುವಾರು ಹಾಗೂ ಗೋಶಾಲೆಗಳ ನಿರ್ವಹಣೆಗೆ, ರೂ.232.00 ಕೋಟಿ Input Subsidy ನೀಡಲು ಹಾಗೂ ಇತರೆ ಬರ–ಪರಿಹಾರ ಕಾರ್ಯಗಳಿಗೆ ರೂ.10.00 ಕೋಟಿ ಖರ್ಚು ಮಾಡಲಾಗಿದೆ.

ಈ ಸಾಲಿನಲ್ಲಿ ಅತಿ ಹೆಚ್ಚು 762 ಗ್ರಾಮಗಳಿಗೆ ಕುಡಿಯುವ ನೀರನ್ನು ಟ್ಯಾಂಕರ್ ಮೂಲಕ ಸರಬರಾಜು ಮಾಡಲಾಗಿದೆ ಹಾಗೂ 214 ಗೋಶಾಲೆಗಳನ್ನು ನಿರ್ವಹಿಸಲಾಯಿತು.

ಮುಂದಿನ ದಿನಗಳಲ್ಲಿ ಬರದ ತೀವ್ರತೆ ಹೆಚ್ಚಾಗಲಿದ್ದು, ಬರ–ನಿರ್ವಹಣೆಗೆ ರೂ.450.00 ಕೋಟಿ ಕ್ರಿಯಾ ಯೋಜನೆ ಮಾಡಲಾಗಿದೆ. ಇದರಲ್ಲಿ ರೂ.100.00 ಕೋಟಿ ತುರ್ತು ಕುಡಿಯುವ ನೀರು ಪೂರೈಕೆಗೆ, ಜಾನುವಾರು ಸಂರಕ್ಷಣೆಗೆ ರೂ.100.00 ಕೋಟಿ ಹಾಗೂ ರೂ.250.00 ಕೋಟಿ ತುರ್ತು ಕುಡಿಯುವ ನೀರಿನ ಕಾಮಗಾರಿಗಳನ್ನು ಕೈಗೊಳ್ಳಲು ಯೋಜನೆ ರಚಿಸಲಾಗಿದೆ. ಇದರಲ್ಲಿ ಮೊದಲನೇ ಕಂತಿನಲ್ಲಿ ರೂ.100.00 ಕೋಟಿ ತುರ್ತು ಕುಡಿಯುವ ನೀರು ಪೂರೈಕೆ ಹಾಗೂ ಜಾನುವಾರು ಸಂರಕ್ಷಣೆಗೆ ಬಿಡುಗಡೆ ಮಾಡಲಾಗಿದೆ.

ಗ್ರಾಮಪಂಚಾಯಿತಿ ಇಲಾಖೆಯ NRDWP ಯೋಜನೆಯಡಿ ರೂ.1964.00 ಕೋಟಿ ವೆಚ್ಚದಲ್ಲಿ 32,000 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಬರ–ಪರಿಸ್ಥಿತಿಯಿಂದ ಹೆಚ್ಚುವರಿಯಾಗಿ ರೂ.402.00 ಕೋಟಿ ವೆಚ್ಚದಲ್ಲಿ 13,000 ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿದೆ.

ನಿರುದ್ಯೋಗ ನಿವಾರಣೆ ಮಾಡಲು ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ 2.45 ಕೋಟಿ ಮಾನವ ದಿನಗಳನ್ನು ಸೃಜಿಸಿ ರೂ.1151.18 ಕೋಟಿಗಳನ್ನು ಖರ್ಚು ಮಾಡಲಾಗಿದೆ. ಈ ಯೋಜನೆಯಡಿಯಲ್ಲಿ 2.78 ಲಕ್ಷ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ಬರದ ಹಿನ್ನಲೆಯಲ್ಲಿ ಬೇಸಿಗೆ ರಜೆಯಲ್ಲಿಯೂ ಸಹ ಮಧ್ಯಾಹ್ನದ ಬಿಸಿಯೂಟ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಆಗಸ್ಟ್ ಮಾಹೆಯಲ್ಲಿ ಎಲ್ಲಾ ಮಕ್ಕಳ ಆರೋಗ್ಯ ತಪಾಸಣೆ ಮಾಡಿ ವಿಟಮಿನ್ ಎ, ಫೋಲಿಕ್ ಆಸಿಡ್, ಡಿ–ವೊರ್ಮಿಂಗ್, ಕಬ್ಬಿನಾಂಶದ ಮಾತ್ರೆಗಳು ನೀಡಲಾಗುತ್ತಿದೆ. ಸುವರ್ಣ ಆರೋಗ್ಯ ತಪಾಸಣೆ ಯೋಜನೆಯಡಿ ಗರ್ಬಿಣಿಯರಿಗೆ ಹಾಗೂ ಬಾಣಂತಿಯರಿಗೆ ಪೌಷ್ಟಿಕಾಂಶದ ಔಷಧಿಗಳನ್ನು ನೀಡುವ ವ್ಯವಸ್ಥೆ ಮಾಡಲಾಗಿದೆ.

ಆ) ಕೇಂದ್ರ ಸರ್ಕಾರದ ಎನ್.ಡಿ.ಆರ್.ಎಫ್ ನಿಧಿಯಿಂದ ಬಿಡುಗಡೆಯಾದ ಮೊತ್ತ ರೂ.749.77 ಕೋಟಿಗಳು. ರಾಜ್ಯ ಸರ್ಕಾರವು ಜಿಲ್ಲಾಧಿಕಾರಿಗಳಿಗೆ ಹಾಗೂ ಅನುಷ್ಠಾನಾಧಿಕಾರಿಗಳಿಗೆ ರೂ.696.71 ಕೋಟಿಗಳನ್ನು ಬಿಡುಗಡೆ ಮಾಡಿದೆ.